ವಿದ್ಯಾರ್ಥಿಗಳಿಗೂ ಕಂದಾಯ ಮತ್ತು ಶಿಕ್ಷಣ ಇಲಾಖೆಯಿಂದ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ ನೀಡಲು ನಿರಾಕರಿಸಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೆ?

ಇ) ಬರದಿದ್ದಲ್ಲಿ ಪುತ್ತೂರು ಪುರಸಭೆ ವ್ಯಾಪ್ತಿಯ ಹೊರಗೆ ಇರುವ ಶಾಲೆಗಳಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ ನೀಡಲು ಸಂಬಂಧಿತ ಇಲಾಖೆಗಳಿಗೆ ನಿರ್ದೇಶನ ನೀಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಪೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಅ) ಗ್ರಾಮೀಣ ಪ್ರದೇಶದಲ್ಲಿನ ಶಾಲೆಗಳಲ್ಲಿನ 1 ರಿಂದ 10ನೇ ತರಗತಿವರೆಗೆ ಓದಿದ ಅಭ್ಯರ್ಥಿಗಳು ಆಯ ಶಾಲಾ ಮುಖ್ಯೋಪಾಧ್ಯಾಯರಿಂದ ನಮೂನೆ-2 ರಲ್ಲಿ ವ್ಯಾಸಂಗ ವಿವರಗಳನ್ನು ದಾಖಲಿಸಿ ದೃಢೀಕರಿಸಿ ನೀಡಿದಲ್ಲಿ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲು ರುಜು ಮಾಡಿ ಪ್ರಮಾಣ ಪತ್ರ ನೀಡುವರು.

ಆ) ಅಂತಹ ಯಾವ ವಿಚಾರವು ಸರ್ಕಾರದ ಗಮನಕ್ಕೆ ಬಂದಿಲ್ಲ. ಪುತ್ತೂರು ಪುರಸಭೆಯ ಸಣ್ಣ ನಗರ ವ್ಯಾಪ್ತಿಯಲ್ಲಿ ಬರುವುದಾಗಿ (1976 ನೇ ಕರ್ನಾಟಕ ಪೌರ ನಿಯಮಗಳ ಅಧಿನಿಯಮ 1976 ಅಥವಾ ಕರ್ನಾಟಕ ಪುರಸಭೆಗಳ ಅಧಿನಿಯಮ 1964) ರಂತೆ ತಿಳಿಸಿರುವುದರಿಂದ ಈ ವ್ಯಾಪ್ತಿಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಗ್ರಾಮೀಣ ಅಭ್ಯರ್ಥಿ ವ್ಯಾಸಂಗ ಪ್ರಮಾಣ ಪತ್ರ ನೀಡಲಾಗುತ್ತಿಲ್ಲ.

ಇ) ನಗರ ಸಭೆ ವ್ಯಾಪ್ತಿಗೆ ಒಳಪಡದ ಶಾಲೆಗಳ ವಿದ್ಯಾರ್ಥಿಗಳಿಗೆ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರಗಳನ್ನು ನಿಯಮಾನುಸಾರ ನೀಡಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯವಲಯ ಕಾರ್ಯಕ್ರಮ

1264(1396) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ರಾಜ್ಯವಲಯ ಕಾರ್ಯಕ್ರಮದಡಿಯಲ್ಲಿ ಮಂಜೂರಾದ ಕಾಮಗಾರಿಗಳನ್ನು ಪೂರ್ತಿಗೊಳಿಸಿದ ನಂತರ ನೀಡಿದ ಕಾಮಗಾರಿಯ ವೆಚ್ಚದ ಬಿಲ್ಲನ್ನು ಅನುದಾನ ಮಂಜೂರಾದ ಆರ್ಥಿಕ ವರ್ಷದೊಳಗೆ ಸಂಬಂಧಿತರಿಗೆ ನೀಡಿರುವ ಕಾರಣಕ್ಕಾಗಿ ವ್ಯಪಗತ (ಲ್ಯಾಪ್ಸ್) ಆಗಿರುವ ಒತ್ತ ಎಷ್ಟು; (ತಾಲ್ಲೂಕುವಾರು ಪಟ್ಟಿ ಒದಗಿಸುವುದು)

ಆ) ಮಂಜೂರಾದ ಕಾಮಗಾರಿಗೆ ತಗಲಿದ ವೆಚ್ಚವನ್ನು ಆರ್ಥಿಕ ವರ್ಷದೊಳಗೆ ವೆಚ್ಚದ ಬಿಲ್ಲನ್ನು ಸಲ್ಲಿಸಿಲ್ಲ ಎಂಬ ಒಂದೇ ಕಾರಣಕ್ಕೆ ಪಾವತಿ ಮಾಡದೇ ಇರುವುದು ಅಸಮಂಜಸವೆಂಬ ವಿಚಾರದ ಬಗ್ಗೆ ಸರ್ಕಾರದ ನಿಲುವೇನು;

ಇ) ಕಾಮಗಾರಿ ಮಂಜೂರುಗೊಂಡ ನಂತರ ಈ ರೀತಿಯಲ್ಲಿ ಕಾರಣ ನೀಡಿ ಹಣ ಪಾವತಿ ಮಾಡದೇ ಇದ್ದಲ್ಲಿ ಈ ವೆಚ್ಚವನ್ನು ಭರಿಸುವುದು ಯಾರು?

ಪೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1998-99 ರಲ್ಲಿ ರೂ. 2.84 ಲಕ್ಷ 1999.2000 ರಲ್ಲಿ ರೂ. 19.46 ಲಕ್ಷಗಳು (2000-01ರಲ್ಲಿ ವ್ಯಪಗತವಾಗಿಲ್ಲ) ಜಿಲ್ಲಾ ಪಂಚಾಯತ್ 31ನೇಯ ಮಾರ್ಚ್ ಒಳಗಾಗಿ ಬಳಸಿಕೊಂಡಿಲ್ಲವಾದರಿಂದ ವ್ಯಪಗತವಾಗಿದೆ. (ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)

ಅ) ಈ ಮೊತ್ತವನ್ನು ಪಾವತಿಸಲು ಜಿಲ್ಲಾ ಪಂಚಾಯತ್ ಸಭೆಗಳಲ್ಲಿ ಚರ್ಚಿಸಿ ಕಾರ್ಯಸೂಚಿ ಮಂಡಿಸಲಾಗಿ ಸರ್ಕಾರದ ಆದೇಶ ನಿರೀಕ್ಷೆಯ ಮೇರೆಗೆ 31.07.2000ದ ವರೆವಿಗೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಾಹಕ ಅಧಿಕಾರಿಯವರು ಆದೇಶ ನೀಡಿದರೂ ಅನುಷ್ಠಾನಾಧಿಕಾರಿಗಳು ಖರ್ಚು ಮಾಡಿರುವುದಿಲ್ಲ. ಸದರಿ ಬಿಲ್ಲನ್ನು ಪಾವತಿಸಲು ಸರ್ಕಾರದಿಂದ ಹೊಸದಾಗಿಯೇ ಮಂಜೂರಾತಿ ದೊರೆಯಬೇಕೇ ಹೊರತು ಒಂದು ಆರ್ಥಿಕ ವರ್ಷದಲ್ಲಿ ಖರ್ಚುಮಾಡಲು ಬಿಡುಗಡೆಯಾದ ಅನುದಾನ ಬಳಕೆಯಾಗದೇ ಇದ್ದಲ್ಲಿ ಮುಂದಿನ ವರ್ಷಕ್ಕೆ ಪಾವತಿಸಲು ನಿಯಮ ಪ್ರಕಾರ ಅವಕಾಶ ಇರುವುದಿಲ್ಲ.

ಇ) ಈ ಬಗ್ಗೆ ಉಪನಿರ್ದೇಶಕರಿಂದ ಜಿಲ್ಲಾ ಪಂಚಾಯತ್ ಮೂಲಕ ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು (ಸಮಂಜಸವಾದ ಕಾರಣಗಳೊಂದಿಗೆ) ಸಿದ್ದಪಡಿಸಿ ವ್ಯಪಗತವಾದ ಮೊತ್ತದಷ್ಟು ಅನುದಾನವನ್ನು ಬಿಡುಗಡೆಗೊಳಿಸಲು ಕೋರಿದಲ್ಲಿ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಅನುದಾನ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆಯನ್ನು ಪರಿಶೀಲಿಸುವುದು.

ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1396ಕ್ಕೆ ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕುವಾರು ವ್ಯಪಗತವಾಗಿರುವ ಅನುದಾನ ವಿವರ

(ರೂ. ಲಕ್ಷಗಳಲ್ಲಿ)

ತಾಲ್ಲೂಕು	1998-99	1999-2000	2000-2001	ಒಟ್ಟು
ಬಂಟ್ವಾಳ	-	5.83	-	5.83
ಬೆಳ್ತಂಗಡಿ	-	2.50	-	2.50
ಮಂಗಳೂರು ತಾ	-	3.18	-	3.18
ಮಂಗಳೂರು ನಗರ	-	2.55	-	2.55
ಮೂಡಬಿದರೆ	-	1.04	-	1.04
ಪುತ್ತೂರು	2.84	0.74	-	3.54
ಸೂಳ್ಯ	-	3.62	-	3.62
ಒಟ್ಟು	2.84	19.46	-	22.30

ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆ

1265(1230) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯ ಮೂಲಕ ಕುಡಿಯುವ ನೀರಿನ ಸೌಲಭ್ಯವನ್ನು ಬಾಗೇಪಲ್ಲಿ, ಗುಡಿಬಂಡೆ ಪಟ್ಟಣ ತಾಲ್ಲೂಕುಗಳಲ್ಲಿ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಆ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿರುವ ನಾಗರೀಕರಿಗೆ ಹಳ್ಳಿಗಾಡು ಜನರು ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗಿರುವ ನೀರನ್ನೇ ಬಳಸುತ್ತಿದ್ದು ಇದರಿಂದ ವಿವಿಧ ಕಾಯಿಲೆಯಿಂದ ಜನತೆಯು ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;